ಬಾರ್ ಅಸೋಸಿಯೇಷನ್‌ನಲ್ಲಿ ೫೦ ಮಂದಿ ಆರ್ಬಿಟ್ರೇಟರ್ಸ್ ಇದ್ದಾರೆ ಎಂದರೆ, ಆಲ್ಲಿ ಕೇಸುಸ್ ಸಿಕ್ಕುವುದು ೩-೪ ಜನರಿಗೆ ಮಾತ್ರ ಯಾರು ದುಡ್ಡು ಕೊಡುತ್ತಾರೆ ಅವರಿಗೆ ಕೇಸುಸ್ ಸಿಕ್ಕುತ್ತವೆಯೇ ಹೊರತು, ರೊಟೇಷನ್ ಪ್ರಕಾರ, ಎಲ್ಲಾ ವಕೀಲರಿಗೆ ಎಂದರೆ ಆರ್ಬಿಟ್ರೇಟರ್ಸ್‌ಗೆ ಸಿಕ್ಕುವುದಿಲ್ಲ. ಅದರ ಸಲುವಾಗಿ ಒಂದು ಸಲಹೆ. ಇದರ ಬಗ್ಗೆ ತಾವು ಹೇಳಿಕೆ ಕೊಡಬೇಕು. ಅದೇನೆಂದರೆ ಪ್ರತಿ ಯೊಂದು ತಾಲ್ಲೂಕುಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಇರತಕ್ಕ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫೀಸರ್ ಮತ್ತು ಬಾರ್ ಅಸೋಸಿಯೇಷನ್ ಅಧ್ಯಕ್ಷರು, ಸೆಕ್ರೆಟರಿ ಏನಿರುತ್ತಾರೆ. ಅವರೊಂದಿಗೆ ಸಮಾಲೋಚನೆ ಮಾಡಿ, ಅದರ ಪ್ರಕಾರ ಕೇಸುಸ್ ಪಂಚಿತಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಅವರು ಕೇಳಿದಂಥ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ ಎಂದು ಭಾವಿಸಿದ್ದೇನೆ. ಮತ್ತೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ವಿಚಾರಗಳ ಬಗ್ಗೆ ನಾನು ಬಿಜಾಪುರಕ್ಕೆ ಹೋದಾಗ, ಅಲ್ಲಿನ ವಕೀಲರು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈ ಕೇಸುಸ್‌ಗಳನ್ನು ವಕೀಲರಿಗೆ ಕೊಡುವಾಗ, ಏನಾದರೂ ಅನ್ಯಾಯವಾದರೆ, ಅದನ್ನು ಸರಿಪಡಿಸುವುದಕ್ಕೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ತಪ್ಪು ಸೂಚನೆ ಪ್ರಕಾರ, ಎಷ್ಟು ಜನರು ಆರ್ಬಿಟ್ರೇಟರ್ಸ್ ಇರುತ್ತಾರೆ, ಒಂದೇ ಸೊತ್ತು, ಒಂದೇ ಸಂಖ್ಯೆಯ ವಾದವಿವಾದಗಳು ಹೋಗಿ ಅಂಥ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದೇನೆ. ಒಂದು ಪಕ್ಷ ಯಾವುದೇ ರೀತಿಯಲ್ಲಿ ಅನ್ಯಾಯವಾದರೆ, ಭ್ರಷ್ಟಾಚಾರ ಇದೆಯೆಂಬುದನ್ನು ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೊಂದು ಮಾತು ಹೇಳಿದ್ದಾರೆ. ಯಾರು ದುಡ್ಡು ಕೊಡುತ್ತಾರೋ ಅವರಿಗೆ ಮಾತ್ರ ಕೇಸುಸ್ ಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಖಂಡಿತವಾಗಿಯೂ ಇಂತಹ ಆರೋಪಗಳನ್ನು ಬರೆದು ಕಳುಹಿಸಿದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ನಮ್ಮ ವಕೀಲವೃಂದ ದವರೂ ಹಣ ಕೊಟ್ಟು ಕೇಸುಸ್ ತೆಗೆದುಕೊಳ್ಳುವುದಕ್ಕೆ ಹೋದರೆ. ಇದು ಬಹಳ ದುರಾವೃಷ್ಟಕರ ಎಂಬ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಇದಿನಬ್ಬ ಅವರೇ. ನಿಮ್ಮ ಪ್ರಶ್ನೆ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ಗೆ ವರ್ಗಾವಣೆಯಾಗಿದೆ. ಅವರು ನಿಮಗೆ ಉತ್ತರ ಕೊಡುತ್ತಾರೆ. ಅವರಿಂದ ನಿಮಗೆ ಉತ್ತರ ತರಿಸಿಕೊಡುತ್ತೇನೆ. ಈಗ ಕೆ. ಕುಶಾಲ ಅವರು. ಪ್ರಶ್ನೆ ೯೦೭(೨೬೫೪) ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಹೆಚ್. ಏಕಾಂತಯ್ಯ.—ಸನ್ಮಾನ್ಯ ಸದಸ್ಯರು, ಖಾಸಗಿ ಸಹಕಾರಿ ಸಂಘ ಎಂದು ಕೇಳಿದ್ದಾರೆ. ಇದಕ್ಕೆ ನಾನು ಯಾವರೀತಿ ಉತ್ತರ ಕೊಡಬೇಕು. ಅದಕ್ಕೋಸ್ಕರ ತಪ್ಪು ಮುಖಾಂತರ ಈಗಾಗಲೇ ಕೇಳಿದ್ದೇನೆ, ನನಗೆ ಅವರು ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟರೆ ಅವರಿಗೆ ಬೇಕಾದಂಥ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿಯಿರುವ ಗ್ರಾಮಕರಣಿಕರ ಹುದ್ದೆಗಳು

೯೦೭ (೨೬೧೮) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಖಾಲಿ ಗ್ರಾಮ ಕರಣಿಕರ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು),—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦೩ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿಯಿದ್ದರೂ ಇತ್ತೀಚಿನ ಸರ್ಕಾರಿ ಆದೇಶ : ಆರ್‌ಡಿ ೧೯೦ ಬಿಎಸ್‌ಸಿ ೮೭, ದಿನಾಂಕ ೨೫-೪-೧೯೮೮ರಲ್ಲಿ ಮಂಡಲ ಪಂಚಾಯಿತಿಗಳ ರಚನೆಗಳ ತತ್ಪರಿಣಾಮವಾಗಿ ಕಂದಾಯ ವೃತ್ತಗಳನ್ನು ವಿಸ್ತರಿಸಿ ಸುಮಾರು ೧೪೧ ಗ್ರಾಮಲೆಕ್ಕಿಗರ ಹುದ್ದೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕಡಿಮೆಗೊಳಿಸಲಾಗಿದೆ. ಆದುದರಿಂದ ಪ್ರಸ್ತುತ ಪರಿಸ್ಥಿತಿಯಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿಯಿರುವುದಿಲ್ಲ.

ಆ) ರಾಜ್ಯದಲ್ಲಿ ಮಂಡಲ ಪಂಚಾಯಿತಿಗಳ ರಚನೆಯಿಂದಾಗಿ ಕಂದಾಯ ಇಲಾಖೆಯ ೭೦೯ ಪ್ರಥಮ ದರ್ಜೆ ಸಹಾಯಕರನ್ನು ಪ್ರತಿನಿಯೋಜನೆ ಮೇಲೆ ನೇಮಕ ಮಾಡಲಾಗಿದ್ದು ತತ್ಪರಿಣಾಮವಾಗಿ ಉದ್ಭವಿಸಿರುವ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿಯನ್ನು ತೊಡೆದುಹಾಕಿ ಹಾಲಿ ಗ್ರಾಮ ಲೆಕ್ಕಿಗರು ಮತ್ತು ದ್ವಿತೀಯ ದರ್ಜೆ ಸಹಾಯಕರಿಗೆ ೬೦ : ೪೦ರ ಅನುಪಾತದಲ್ಲಿ ಮುಂಬಡ್ತಿ ನೀಡಲು ಪ್ರಸ್ತುತ ವ್ಯಾಪ್ತಿಯ ಮತ್ತು ನೇಮಕಾತಿ ನಿಯಮಗಳಿಗೆ ತಾತ್ಕಾಲಿಕ ತಿದ್ದುಪಡಿ ಮಾಡಲಾಗಿದೆ. ಓಗೆ ಹಾಲಿ ಗ್ರಾಮಲೆಕ್ಕಿಗರಿಗೆ ಬಡ್ತಿ ನೀಡುವ ಮೂಲಕ ತೆರವಾಗುವ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಾಧ್ಯತೆಯನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೫೧ ಗ್ರಾಮ ಲೆಕ್ಕಿಗರ ಹುದ್ದೆಯನ್ನು ಕಡಿಮೆ ಮಾಡಿದ್ದರಿಂದ ರೆವಿನ್ಯೂ ಇಲಾಖೆಯಲ್ಲಿ ಕೆಲಸಕ್ಕೆ ತೊಂದರೆಯಾಗಿದೆಯೆ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ಪರಿಶೀಲನೆ ನಡೆಸುತ್ತೀರಾ ? ಮತ್ತು ಬಡ್ತಿಯಾದ ಸ್ಥಾನಕ್ಕೆ ನೇರ ನೇಮಕಾತಿ ಯಾವಾಗ ಆಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ಮನೆಯಲ್ಲಿ ಅನೇಕ ಸಲ ಈ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಗ್ರಾಮಲೆಕ್ಕಿಗರು ಮಂಡಲ್ ಪಂಚಾಯ್ತಿ ಸೆಕ್ರಟರಿಗಳಾಗಿ ಕೆಲಸ ಮಾಡುತ್ತಿದ್ದರು. ಈ ಹುದ್ದೆಗೆ ಬೇರೆಯವರು ಬಂದಿದ್ದರಿಂದ ಅಷ್ಟು ಸ್ಥಾನಗಳನ್ನು ಕಡಿಮೆ ಮಾಡಿ, ಇದ್ದ ಗ್ರಾಮ ಲೆಕ್ಕಿಗರಿಗೆ, ಅವರ ಕ್ಷೇತ್ರವನ್ನು ವಿಸ್ತರಣೆ ಮಾಡಿದ್ದೇವೆ. ಇದು ತೊಂದರೆಯಾಗುತ್ತದೆ ಎಂಬ ವಿಚಾರವನ್ನು ಪರಿಶೀಲನೆ ಮಾಡುತ್ತೇವೆ. ಇದು ತೊಂದರೆಯಾದರೆ, ಹೆಚ್ಚು ಗ್ರಾಮಲೆಕ್ಕಿಗರಿಗೆ ಕೊಡುವುದಕ್ಕೆ ಪ್ರಯತ್ನಮಾಡುತ್ತೇನೆ.

ನಾಲ್ಕುವರೆ ಚೈನ್ ಕುಮ್ಕಿ ಸ್ಥಳದ ದರ್ಖಾಸ್ತು ನೀಡುವ ವಿಚಾರ

೯೦೧ (೧೯೦೪) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕಂದಾಯ, ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದ ರೈತರು ತಮ್ಮ ಗದ್ದೆಗಳನ್ನು ಬೇಸಾಯ ಮಾಡಬೇಕಿದ್ದರೆ ಗದ್ದೆಗಳ ಪಕ್ಕದಲ್ಲಿರುವ ಕುಮ್ಕಿ ಸ್ಥಳ ಅವರಿಗೆ ಸಿಗದಿದ್ದರೆ ಬೇಸಾಯ ಮಾಡುವುದು ಸಾಧ್ಯವಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕುಮ್ಕಿ ಸ್ಥಳಗಳನ್ನು ಕೊಡಿಸಬೇಕೆಂದು ರೈತರು ಅನೇಕ ವರ್ಷಗಳಿಂದ ಬೇಡಿಕೆ ಸಲ್ಲಿಸಿರುವುದಕ್ಕೆ ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಇ) ರೈತರ ಗದ್ದೆ ಒಕ್ಕಿದ ಕುಮ್ಕಿ ಸ್ಥಳ ನಾಲ್ಕುವರೆ ಚೈನ್‌ವರೆಗೆ ದರ್ಖಾಸ್ತು ಮಾಡಿಸಿ ಕೊಡುವುದು ಯಾವಾಗ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಅಧಿನಿಯಮ ೭೯(೨) ರನ್ವಯ ಕುಮ್ಕಿ ಸವಲತ್ತನ್ನು ವರ್ಗದಾರರು ಉಪಯೋಗಿಸುವ ಅವಕಾಶವನ್ನು ಹೊಂದಿದ್ದಾರೆ. ಆದರೆ, ಯಾವುದೇ ವ್ಯಕ್ತಿಗಳಿಗೆ ಸದರಿ ಜಮೀನನ್ನು ಮೇಲ್ಕಂಡ ಕಾಯ್ದೆಯನ್ವಯ ಮಂಜೂರು ಮಾಡುವುದಕ್ಕೆ ಅವಕಾಶ ವಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಸಂಪುಟದ ಉಪಸಮಿತಿಯು ನೇಮಕಗೊಂಡಿದ್ದು ವಿಷಯವು ಸರ್ಕಾರದ ಪರಿಶೀಲನಾ ಹಂತದಲ್ಲಿದೆ.

ಇ) ಸಂಪುಟದ ಉಪ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ಕ್ರಮಬದ್ಧಗೊಳಿಸುವ ವಿಚಾರವಾಗಲಿ, ಅಥವಾ ದರಖಾಸ್ತು ಮಂಜೂರಿ ಮಾಡುವ ವಿಚಾರದಲ್ಲಾಗಲಿ, ಅಸ್ಪದವಿದ್ದಲ್ಲಿ ಆ ರೀತಿ ಕ್ರಮ ಜರುಗಿಸಲಾಗುವುದು.